ಯುದ್ಧಕ್ಕೆ ಹೊರಟಿರುವೆ' ಎಂದ. ನಾರದ ನಸುನಗುತ್ತ 'ಅಲ್ಲಯ್ಯಾ, ತ್ರಿಮುಖ, ಆ ಚತುರ್ಮುಖ ಬ್ರಹ್ಮನ ತಲೆಗಳನ್ನು ಕಡಿದು ನಿನ್ನ ತಲೆಗಳ ಲೆಕ್ಕ ಹೆಚ್ಚಿಸಿಕೊಳ್ಳುವ ಬದಲು ನೀನೇ ಪಂಚಮುಖನಾಗಬಾರದೇಕೆ? ಅಂದರೆ, ನೀನು ಇನ್ನೆರಡು ಹೆಚ್ಚಿನ ತಲೆಗಳನ್ನು ಪಡೆಯಬೇಕು' ಎಂದ. ತ್ರಿಮುಖನಿಗೆ ಇದು ಸರಿಯೆನಿಸಿದರೂ ಇದನ್ನು ಸಾಧಿಸುವುದು ಹೇಗೆ ಎಂದು ತಿಳಿಯಲಿಲ್ಲ. ಅವನ ಯೋಚನೆಯನ್ನು ಅರ್ಥ ಮಾಡಿಕೊಂಡ ನಾರದ 'ನೋಡು, ಬ್ರಹ್ಮದೇವ ತ್ರಿಮೂರ್ತಿಗಳಲ್ಲೊಬ್ಬ. ಈ ಜಗತ್ತಿನ ಸೃಷ್ಟಿಕರ್ತ. ಅವನ ಮೇಲೆ ಯುದ್ಧ ಅಸಾಧ್ಯ. ಅದರ ಬದಲು ನಿನ್ನ ಐದು ತಲೆಗಳ ಗುರಿ ಸಾಧಿಸಲು ಬೇರೆ ಮಾರ್ಗವಿದೆ' ಎಂದ. ಅದಕ್ಕೆ ತ್ರಿಮುಖ 'ಸರಿ ನಾರದರೆ, ಇನ್ನೆರಡು ತಲೆಗಳನ್ನು ಸಂಪಾದಿಸಲು ನಾನೇನು ಮಾಡಬೇಕು ಹೇಳಿ' ಎಂದ. ಆಗ ನಾರದ 'ತ್ರಿಮೂರ್ತಿಗಳಲ್ಲಿ ಮತ್ತೊಬ್ಬನಾದ ಶಿವ ಭಕ್ತರು ಕೇಳಿದ ವರಗಳನ್ನು ಕೊಡುವುದರಲ್ಲಿ ಅಗ್ರಗಣ್ಯ. ಶಿವನನ್ನು ಕುರಿತು ತಪಸ್ಸು ಮಾಡು. ಶಿವ ಪ್ರತ್ಯಕ್ಷನಾದಾಗ ಇನ್ನೆರಡು ತಲೆಗಳು ಬೇಕೆಂಬ ವರ ಕೇಳು' ಎಂದು ಹೇಳಿ ಹೊರಟ.

ತ್ರಿಮುಖ, ನಾರದರ ಸಲಹೆಯಂತೆ ಶಿವನ ಕುರಿತು ತಪಸ್ಸು ಮಾಡತೊಡಗಿದ. ಇತ್ತ ನಾರದ ಪರಮೇಶ್ವರನನ್ನು ಸಂದರ್ಶಿಸಿ ತ್ರಿಮುಖನ ತಪಸ್ಸಿನ ವಿಷಯವನ್ನು ತಿಳಿಸಿದ. ಈಶ್ವರ, ಬ್ರಹ್ಮ ಮತ್ತು ವಿಷ್ಣು ಭೇಟಿ ಮಾಡಿ ಅವರ ಸಲಹೆ ಕೇಳಿದ. ಆಗ ವಿಷ್ಣು 'ಚಿಂತೆ ಬೇಡ ಪರಮೇಶ್ವರ. ತ್ರಿಮುಖ ಕೇಳಲಿರುವುದು ಎರಡು ತಲೆಗಳನ್ನಷ್ಟೇ. ಆ ತಲೆಗಳಲ್ಲಿ ಕಣ್ಣು, ಕಿವಿ, ಮೂಗು, ಬಾಯಿಗಳಿದ್ದರೆ ಸಾಕು. ತಲೆಯೊಳಗೆ ಬುದ್ಧಿಯಿರಬೇಕೆಂದೇನೂ ಇಲ್ಲವಲ್ಲ. ಬುದ್ಧಿಯಿಲ್ಲದ ಎರಡು ತಲೆಗಳ ವರ ನೀಡು. ಮೊದಲೇ ಅವನು ದಡ್ಡ. ಬುದ್ಧಿಯಿಲ್ಲದ ಎರಡು ತಲೆಗಳಿಂದ ಅವನು ಹುಚ್ಚನಾಗುತ್ತಾನೆ' ಎಂದ. ಆಗ ಬ್ರಹ್ಮ 'ದುಷ್ಟನೊಬ್ಬ ಹುಚ್ಚನಾದರೆ ತುಂಬ ಅಪಾಯವಲ್ಲವೇ' ಎಂದ.

ಆತಂಕಗೊಂಡ ಈಶ್ವರ ಹಾಗೂ ಬ್ರಹ್ಮನನ್ನು ವಿಷ್ಣು ಸಮಾಧಾನಗೊಳಿಸುತ್ತಾ ಹೇಳಿದ 'ಅಪಾಯ ಹೆಚ್ಚು ದಿನ ಇರುವುದಿಲ್ಲ. ಈಗಾಗಲೇ ಅವನ ಪಾಪದ ಕೊಡ ತುಂಬುತ್ತಾ ಬಂದಿದೆ. ಬ್ರಹ್ಮನೊಡನೆ ಯುದ್ಧ ಮಾಡಲು ನಿಶ್ಚಯಿಸಿದಾಗಲೇ ಅವನ ಅಂತ್ಯವನ್ನು ಅವನೇ ಹತ್ತಿರಕ್ಕೆ ತಂದುಕೊಂಡ. ಕೆಲವೇ ದಿನಗಳಲ್ಲಿ ಸೂರ್ಯದೇವನಿಂದ ಹತನಾಗುತ್ತಾನೆ'.

ವಿಷ್ಣುವಿನ ಸಲಹೆಯಂತೆ ಶಿವ ತ್ರಿಮುಖನಿಗೆ ಪ್ರತ್ಯಕ್ಷನಾಗಿ ಅವನ ಕೋರಿಕೆಯಂತೆ ಅವನಿಗೆ ಮತ್ತೆರಡು ತಲೆಗಳನ್ನು ವರವಾಗಿ ನೀಡಿದ. ವಿಷ್ಣು, ಸೂರ್ಯನಿಗೆ ತ್ರಿಮುಖನ ವಿಷಯವನ್ನೆಲ್ಲಾ ತಿಳಿಸಿ ಅವನ ಸಂಹಾರದ ಬಗ್ಗೆ ಸಲಹೆಗಳನ್ನು ನೀಡುತ್ತಾನೆ. ಶಿವನಿಂದ ವರ ಪಡೆದ ತ್ರಿಮುಖ ಪಂಚಮುಖನಾಗುತ್ತಾನೆ. ಬ್ರಹ್ಮನಿಗಿಂತ ತಾನೇ ಶ್ರೇಷ್ಠನೆಂದು ಬೀಗುತ್ತಾನೆ. ತಕ್ಷಣವೇ ಅವನಿಗೆ ತೊಂದರೆಗಳೂ ಪ್ರಾರಂಭವಾಗುತ್ತವೆ. ಮೊದಲ ಮೂರು ತಲೆಗಳ ಯೋಚನೆ, ನಡವಳಿಕೆ ಒಂದು ರೀತಿಯಾದರೆ, ಹೊಸ ತಲೆಗಳ ಯೋಚನೆ, ನಡವಳಿಕೆ ಮತ್ತೊಂದು ರೀತಿಯಾಗಿರುತ್ತದೆ. ತಲೆಗಳ ಈ ತೊಳಲಾಟದಿಂದ ಪಂಚಮುಖನಿಗೆ ವಿಪರೀತ ಕೋಪ, ಅಸಹನೆ, ಅಶಾಂತಿ ಉಂಟಾಗಿ ನೆಮ್ಮದಿಯಿಲ್ಲದಂತಾಗುತ್ತದೆ. ಹುಚ್ಚನಂತೆ ವರ್ತಿಸತೊಡಗುತ್ತಾನೆ. ಅವನ ಹುಚ್ಚಾಟಕ್ಕೆ ಎಲ್ಲೆಲ್ಲೂ ಅಲ್ಲೋಲಕಲ್ಲೋಲ ಉಂಟಾಗುತ್ತದೆ.

ಬಿಸಿಲುಗಾಲದ ಮಟಮಟ ಮಧ್ಯಾಹ್ನದ ಒಂದು ದಿನ ಸೂರ್ಯನ ತಾಪ ವಿಪರೀತ ಹೆಚ್ಚಾಗಿ ಎಲ್ಲೆಲ್ಲೂ ಹಾಹಾಕಾರ ಉಂಟಾಗುತ್ತದೆ. ಪಂಚಮುಖನಂತೂ ಸೂರ್ಯನ ಆರ್ಭಟದಿಂದ ವಿಪರೀತ ಕೋಪಗೊಂಡು ತನ್ನ ಬೇಗೆಗೆ ಕಾರಣನಾದ ಸೂರ್ಯನನ್ನೇ ನಾಶ ಮಾಡಿಬಿಡುತ್ತೇನೆಂದು ಆರ್ಭಟಿಸುತ್ತಾ ಆಕಾಶಕ್ಕೆ ಹಾರಿ ಸೂರ್ಯನೆಡೆ ಹೊರಡುತ್ತಾನೆ. ಪಂಚಮುಖ ತನ್ನ ಸಮೀಪಕ್ಕೆ ಬರುತ್ತಿದ್ದಂತೆ ಸೂರ್ಯ ತನ್ನ ತಾಪವನ್ನು ಇನ್ನೂ ಹೆಚ್ಚಿಸಿ ಅವನನ್ನು ಸುಟ್ಟು ಭಸ್ಮ ಮಾಡಿ ತಕ್ಷಣ ಶಾಂತನಾಗುತ್ತಾನೆ.

ದುಷ್ಟ ರಾಕ್ಷಸನೊಬ್ಬನ ಅಂತ್ಯದಿಂದ ಭೂಲೋಕದ ವಾಸಿಗಳೆಲ್ಲ ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ.





**ನಿಧೀಶ್**

9ನೇ ತರಗತಿ, ಪೋದರ್ ಇಂಟರ್‌ನ್ಯಾಷನಲ್ ಸ್ಕೂಲ್, ಹಾಸನ





**ವೇದ ಎಂ.ಪಿ.**

7ನೇ ತರಗತಿ, ಇಂಡಿಯನ್ ಇಂಟರ್‌ನ್ಯಾಷನಲ್ ಸ್ಕೂಲ್, ಚಿತ್ರದುರ್ಗ